ಆಯುರ್ವೇದ ಪಂಡಿತರ ಕುಟುಂಬ. ಅವರ ಹಿರಿಯರೆಲ್ಲಾ ಇದ್ದದ್ದು ಕೃಷ್ಣರಾಜಪೇಟೆಯ ಕೈಗೋನಹಳ್ಳಿ ಗ್ರಾಮದಲ್ಲಿ. ಅವರೆಲ್ಲ ಸುತ್ತಮುತ್ತಲ ಹತ್ತು ಹಲವು ಊರುಗಳಿಗೆ ವೈದ್ಯಕ್ಕೆ ಹೋಗಿ ಜನಪ್ರಿಯರಾಗಿದ್ದವರು. ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ನೆಮ್ಮದಿಯ ಜೀವನ ಸಾಗಿಸಿದವರು.

ಶ್ರೀಕಂಠಪಂಡಿತರ ಮುತ್ತಾತನ ಮುತ್ತಾತ, ಪಾರಂಪರಿಕ ವೈದ್ಯವಲ್ಲದೆ ಅಲ್ಪಸ್ವಲ್ಪ ರಸವಿದ್ಯೆಯನ್ನು ಕಲಿತು, ಅದರಲ್ಲಿ ಪಾರಂಗತನಾಗುತ್ತಿದ್ದೇನೆ ಎಂದುಕೊಂಡಿದ್ದರಂತೆ. ನಮ್ಮ ಈ ರಸವಿದ್ಯಾ ಪಂಡಿತರು ತಮ್ಮ ವೈದ್ಯವೃತ್ತಿಯ ಜೊತೆಗೆ ಅನೇಕ ಅರೆವೈಜ್ಞಾನಿಕ ಪ್ರಯೋಗಗಳಲ್ಲಿ ತೊಡಗಿಸಿಕೊಂಡಿದ್ದರು. ಯಾವ ಯಾವುದೋ ವಸ್ತುಗಳನ್ನು ಬೇರೆ ಬೇರೆ ಎಲೆ, ಕಾಯಿ, ನಾರು, ಬೇರು, ತೊಗಟೆಗಳೊಂದಿಗೆ ಕಾಯಿಸಿ, ಕುದಿಸಿ, ಆರಿಸಿ, ಬೆರೆಸಿ ಏನೇನೋ ಉಪ ಉತ್ಪನ್ನಗಳನ್ನು ಪಡೆದು ಸಂತುಷ್ಟರಾಗುತ್ತಿದ್ದರು. ಅವುಗಳ ಉಪಯೋಗದ ಬಗ್ಗೆ ಯಾವುದೇ ದಾಖಲೆಗಳಾಗಲಿ, ಹೇಳಿಕೆಗಳಾಗಲಿ ಇಲ್ಲವಾದ್ದರಿಂದ ಅದನ್ನು ಅಲ್ಲಿಗೆ ಬಿಟ್ಟುಬಿಡೋಣ. ಆದರೆ ಅವರ ಸಂತುಷ್ಟಿಗೆ ಕಾರಣ ತಮ್ಮ ಪ್ರಯೋಗಗಳಿಂದ ತಾವು ಏನನ್ನೋ ಉತ್ಪಾದಿಸಿದೆನೆಂಬ ಹೆಮ್ಮೆ. ಈ ಧನಾತ್ಮಕ ಚಿಂತನೆಯೇ ಅವರನ್ನು ಇನ್ನೂ ಹೆಚ್ಚು ಪ್ರಯೋಗಶೀಲರನ್ನಾಗಿ ಮಾಡಿ, ಹಿಮಾಲಯದಿಂದ ಬಂದ ಸಾಧುಗಳ ಜೊತೆ ವಿಚಾರ ವಿಮರ್ಶೆ ಮಾಡಲು ಪುಷ್ಟಿಕೊಟ್ಟಿದ್ದವು. ಹೀಗಾಗಿ ಬೇರೆಯ ಧಾತುಗಳಿಂದ ಚಿನ್ನವನ್ನು ಮಾಡುವ ಕಾರ್ಯವನ್ನು ಅವರು ಪ್ರಾರಂಭಿಸಿಯೇ ಬಿಟ್ಟರು.

ಒಮ್ಮೆ ವೈದ್ಯಕ್ಕಾಗಿ ದೂರದ ಊರಿಗೆ ಹೋಗಿ ಹಿಂದಿರುಗುವಾಗ ಕತ್ತಲಾಗಿಹೋಗಿತ್ತು. ಅಂದು ಪೌರ್ಣಮಿ. ಚಂದ್ರನ ಬೆಳಕು ಹರಡಿತ್ತು. ಸ್ಮಶಾನದ ಬಳಿ ಬರುವ ವೇಳೆಗೆ ಮಧ್ಯರಾತ್ರಿಯಾಗಿತ್ತು. ಅವರು ಹೆದರದೆ ಇಂದ್ರಾಕ್ಷಿ ಕವಚವನ್ನು ಜಪಿಸುತ್ತ, ಭೂತ ಪ್ರೇತಗಳ ಗಮನ ಸೆಳೆಯುವುದನ್ನು ತಪ್ಪಿಸಲು ತುದಿಗಾಲಲ್ಲಿ ನಿಶ್ಶಬ್ದವಾಗಿ ಆ ಪ್ರದೇಶವನ್ನು ದಾಟಿ, ಕೆರೆಯ ಏರಿಯ ಕಡೆ ನಡೆದರು. ಚೆನ್ನಾಗಿ ಮಳೆ ಬಂದು ಕೆರೆ ಕೋಡಿ ಬಿದ್ದಿತ್ತು. ಈಗ ಅದರ ಭರ್ತಿ ನೀರು ತುಂಬಿತ್ತು.

ಆಗ ನಮ್ಮ ರಸವಿದ್ಯಾಪಂಡಿತರಿಗೆ ಥಟ್ಟನೆ ನೆನಪಾದದ್ದು ಅವರ ಪೂರ್ವಿಕರಿಂದ ತಿಳಿದುಬಂದಿದ್ದ ಒಂದು ಗುಟ್ಟು! 'ಕೆರೆ ಕೋಡಿ ಬಿದ್ದು ಭರ್ತಿ ನೀರಿದ್ದರೆ, ಬೆಳದಿಂಗಳ ಮಧ್ಯರಾತ್ರಿಯ ಅನಂತರ ಕೆರೆಯ ಒಳಗೆ ಇರುವ ನೀರುಮನುಷ್ಯರು ಹೊರಗೆ ಬಂದು ಕೆರೆಯ ಕಟ್ಟೆಯ ಮೇಲೆ ಕುಳಿತು ವಿಹರಿಸುತ್ತಾರೆ. ನಮಗೆ ತಿಳಿಯದ ಅನೇಕ ವಿಚಾರಗಳು ಅವರಿಗೆ ತಿಳಿದಿವೆ. ಅವರನ್ನು ಕಂಡರೆ ನಮಗೆ ಅದೃಷ್ಟ ಖುಲಾಯಿಸುತ್ತದೆ. ಆದರೆ ಮನುಷ್ಯರ ಸುಳಿವು ಸಿಕ್ಕಿದರೆ ಅವರು ನೀರಿಗೆ ಧುಮುಕಿ ಮಾಯವಾಗಿ ಬಿಡುತ್ತಾರೆ.'

ಅದನ್ನು ನೆನೆಸಿಕೊಂಡು ಕೆರೆಯ ಕಡೆ ತುದಿಗಾಲಿನಲ್ಲೇ ನಡೆಯುತ್ತಾ ಬಂದ ಪಂಡಿತರಿಗೆ ಕೆರೆಯ ಏರಿಯ ಮೇಲೆ ಅಸ್ಪಷ್ಟವಾಗಿ ಇಬ್ಬರು ಕುಳಿತಿರುವಂತೆ ಕಂಡಿತು. ಏರಿಯ ಮೇಲಿದ್ದ ಮರಗಳ ಮರೆಯಲ್ಲಿ ಮೆಲ್ಲನೆ ಅವರತ್ತ ಸಾಗಿದರು. ಸ್ವಲ್ಪ ಹತ್ತಿರ ಬಂದಾಗ ಅಲ್ಲಿ ಕುಳಿತಿರುವವರು ನೀರುಮನುಷ್ಯರು ಎಂದು ಅವರಿಗೆ ಸ್ಪಷ್ಟವಾಗಿ ಹೋಯಿತು. ಅವರುಗಳು ಅರೆಪಾರದರ್ಶಕವಾಗಿದ್ದರಿಂದ ಅವರ ರೂಪ ಸಂಪೂರ್ಣವಾಗಿ ಕಾಣುತ್ತಿರಲಿಲ್ಲ. ತಮ್ಮ ಅದೃಷ್ಟವನ್ನು ನೆನೆಸಿಕೊಂಡು ಪಂಡಿತರು ಅಲ್ಲೇ ಮರದ ಹಿಂದೆ ಮರೆಯಾಗಿ ನಿಂತರು. ಅವರ ಮಾತು ಇವರ ಕಿವಿಗೆ ಬಿತ್ತು.

ಹೆಣ್ಣು: ಈ ಮನುಷ್ಯರಿಗೆ ಬಂಗಾರದ ಮೇಲೆ ಯಾಕೆ ಅಷ್ಟು ಆಸೆ?

ಗಂಡು: ಅದು ಹೆಚ್ಚಾಗಿ ದೊರೆಯುವುದಿಲ್ಲ. ಅದಕ್ಕೆ ಇರುವ ಚಿನ್ನವೆಲ್ಲಾ ತಮಗೆ ಬೇಕು ಅಂತ ದುರಾಸೆಪಡುತ್ತಾರೆ. ಎಂದು ಹೇಳಿ ಜೋರಾಗಿ ನಕ್ಕುಬಿಟ್ಟ.

ಹೆ: ಯಾಕೆ ಹಾಗೆ ನಗುತ್ತಿದ್ದೀಯ?

ಗಂ: ಯಾಕೆಂದರೆ ಅವರಿಗೆ ಬಂಗಾರ ಮಾಡುವುದು ಗೊತ್ತಿಲ್ಲವಲ್ಲ ಅದಕ್ಕೆ.

ಹೆ: ಬಂಗಾರ ಭೂಮಿಯಲ್ಲಿ ಸಿಕ್ಕುತ್ತಲ್ಲ. ಅದನ್ನು ಮಾಡುವುದು ಅಂದರೆ ಏನು?

**ತನ್ನ ಪತ್ನಿಗೆ ಪಾದರಸದ ಭಸ್ಮವನ್ನು ಚಿನ್ನವಾಗಿಸುವ ಗುಟ್ಟನ್ನು ಹೇಳಲು ನೀರುಮನುಷ್ಯ ಸಿದ್ಧನಾದ. ಆದರೆ, ರಸವಿದ್ಯಾಪಂಡಿತರು ರಸಭಂಗ ಮಾಡಬೇಕೆ?**

ಗಂ: ಕೆಲವು ವಸ್ತುಗಳಿಂದ ನಾವೇ ನಮಗೆ ಬೇಕಾದಷ್ಟು ಚಿನ್ನವನ್ನು ಮಾಡಿಕೊಳ್ಳಬಹುದು. ಆ ವಿಚಾರ ನೆನಪಿಗೆ ಬಂತು. ಅದು ಮನುಷ್ಯನಿಗೆ ಗೊತ್ತಿಲ್ಲ. ಅದಕ್ಕೆ ನನಗೆ ನಗು ಬಂದದ್ದು.

ಹೆ: ಹೌದಾ? ಹೇಗೆ ಬಂಗಾರ ಮಾಡುವುದು?

ಗಂ: ನಾನು ಹೇಳುವುದಿಲ್ಲ. ಮನುಷ್ಯನಿಗೆ ಗೊತ್ತಾದರೆ ತೊಂದರೆಯಾಗುತ್ತದೆ.

ಹೆ: ಇಲ್ಲಿ ನಾವಿಬ್ಬರೇ ಇರುವುದು, ಮನುಷ್ಯರು ಯಾರಿದ್ದಾರೆ?

ಗಂ: ನಿನಗೆ ಗೊತ್ತಿಲ್ಲ. ಅವರು ಮಹಾ ಚತುರರು, ಚಾಲಾಕಿಗಳು. ನಾನು ಹೇಳುವುದಿಲ್ಲ.

ಹೆ: ನೀನು ಹೇಳುವವರೆಗೂ ನಾನು ಇಲ್ಲಿಂದ ಕದಲುವುದಿಲ್ಲ.

ಗಂ: ಒಳ್ಳೆ ಪೀಕಲಾಟ ಆಯ್ತಲ್ಲಾ. ಸರಿ ಕೇಳು, ಮೊದಲನೆಯದು ಪಾದರಸದ ಭಸ್ಮ ತೆಗೆದುಕೊಂಡು, ಅದರ ಎರಡರಷ್ಟು ನೀರು ಹಾಕಿ ಅದಕ್ಕೆ ಎರಡು ರೀತಿ ಸೊಪ್ಪು ಹಾಕಿ ಕುದಿಸಿದರೆ ಚಿನ್ನ ಸಿದ್ಧ.

ಹೆ: ಯಾವ ಸೊಪ್ಪು? ಎಲ್ಲಿ ಸಿಗುತ್ತೆ? ಕಾಡಿನಲ್ಲಾ?

ಗಂ: ಇಲ್ಲ. ಇಲ್ಲೇ ಸಿಕ್ಕುತ್ತೆ.

ರಸವಿದ್ಯಾಪಂಡಿತರಿಗೆ ಸ್ವರ್ಗಕ್ಕೆ ಮೂರೇ ಗೇಣು! ತಾವು ಇಷ್ಟು ದಿನ ತಿಳಿಯಲು ಪ್ರಯತ್ನಪಡುತ್ತಿದ್ದ ವಿಚಾರ ಈಗ ಸುಲಭವಾಗಿ ಅವರಿಗೆ ಗೊತ್ತಾಗುತ್ತಿತ್ತು. ಇದರಿಂದ ಅವರು ಆನಂದದಿಂದ ತೇಲಾಡುತ್ತ ಮೈಮರೆತು 'ಯಾವ ಸೊಪ್ಪು?' ಎಂದು ಗಟ್ಟಿಯಾಗಿ ಕೇಳಿಬಿಟ್ಟರು. ನೀರುಮನುಷ್ಯ ದಂಪತಿ, ಗಾಬರಿಯಿಂದ ಹಿಂದೆ ತಿರುಗಿ ಪಂಡಿತರನ್ನು ನೋಡಿ, ದುಡುಂ ಎಂದು ನೀರಿಗೆ ಧುಮುಕಿ ಮಾಯವಾಗಿಹೋದರು. ಪಂಡಿತರಿಗೋ ಭಾರಿ ನಿರಾಶೆ. ಮೈಮರೆವಿಗೆ ತಮ್ಮನ್ನು ತಾವೇ ಹಳಿದುಕೊಂಡರು.

ಮಾರನೆಯ ದಿನದಿಂದ ಪಾದರಸದ ಭಸ್ಮಕ್ಕೆ ಹುಡುಕಾಡಿದರು. ಕೊನೆಗೆ ಇವರ ಪ್ರಯೋಗಗಳ ಬಗ್ಗೆ ತಿಳಿದಿದ್ದ ದೂರದ ಊರಿನ ಗಂದಿಗೆ ಅಂಗಡಿಯವನೊಬ್ಬ ಅದನ್ನು ತಂದು ಕೊಡಲು ಒಪ್ಪಿಕೊಂಡ. ಕೇಳಿದಷ್ಟು ಹಣವನ್ನು ಕೊಟ್ಟು ಅವರು ಅದನ್ನು ಕೊಂಡುಕೊಂಡರು. ಅಂಗಡಿಯವನ ಪಾಲಿಗೆ ಅವನು ಮಾರಿದ ಪಾದರಸದ ಭಸ್ಮವು ಚಿನ್ನವಾಗಿ ಪರಿವರ್ತಿತವಾಗಿತ್ತು!

ಪಂಡಿತರ ಅನೇಕ ಪ್ರಯೋಗಗಳು ಯಾವುದೇ ಫಲ ಕೊಡಲಿಲ್ಲ. ಯಾಕೆಂದರೆ ಅವರಿಗೆ ತಿಳಿದುಬಂದದ್ದು ಅರ್ಧ ವಿಚಾರ ಮಾತ್ರ. ಪಂಡಿತರು ವೈದ್ಯವೃತ್ತಿಯನ್ನು ಬಿಟ್ಟುಬಿಟ್ಟರು. ಕೈಯಲ್ಲಿದ್ದುದೆಲ್ಲಾ ಖಾಲಿಯಾದಾಗ, ಅಭಾವ ವೈರಾಗ್ಯದಿಂದ ಹಿಮಾಲಯಕ್ಕೆ ಪ್ರಯಾಣ ಬೆಳೆಸಿಬಿಟ್ಟರು. ಮತ್ತೆ ಹಿಂದೆ ಬರಲಿಲ್ಲ.

ಈ ಕತೆಯನ್ನು ಕೇಳಿದ ಮೇಲೆ ನನಗೆ ಅನೇಕ ಪ್ರಶ್ನೆಗಳು ಹುಟ್ಟಿದವು. ನಮ್ಮ ತಾತನವರನ್ನು ಒಂದೊಂದಾಗಿ ಕೇಳಿದೆ.

'ಆ ನೀರುಮನುಷ್ಯರಿಗೆ ಕನ್ನಡ ಬರ್ತಿತ್ತಾ?'

ಅದು ನಮ್ಮ ತಾತನವರಿಗೆ ಪ್ರಶ್ನೆ ಎಂದು ಅನ್ನಿಸಲೇ ಇಲ್ಲ. ಅವರು ಹೇಳಿದ್ದು ಹೀಗಿತ್ತು: 'ಬರದೇ ಏನು! ಅವರು ಕುಡಿದದ್ದು ನಮ್ಮೂರ ಕೆರೆಯ ನೀರನ್ನೇ ಅಲ್ಲವೆ?'

ಅದರ ಅರ್ಥ ನನಗೆ ಈಗ ಸ್ಪಷ್ಟವಾಗುತ್ತಿದೆ. ಅದು 'ನಮ್ಮ ಬೇರು ಉಂಡ ನಮ್ಮದೇ ಊರಿನ ನೀರು, ಹೊಕ್ಕಳುಬಳ್ಳಿಯ ಬಾಂಧವ್ಯ. ಸ್ವಾಭಾವಿಕವಾಗಿ, ಜನ್ಮಸಿದ್ಧವಾಗಿ ಬರುವುದನ್ನು ಹೇಗೆ ಮರೆಯಲು ಸಾಧ್ಯ!'

ನನ್ನ ಎರಡನೆಯ ಪ್ರಶ್ನೆ: 'ಮುಂದಿನ ತಲೆಮಾರಿನವರು ಯಾಕೆ ಆ ಪ್ರಯೋಗಗಳನ್ನು ಮುಂದುವರಿಸಲಿಲ್ಲ?'

ತಾತನವರು ಕೊಟ್ಟ ಉತ್ತರ ಬಹಳ ಮಾರ್ಮಿಕವಾಗಿತ್ತು. ಅಂದು ನನಗೆ ಅರ್ಥವಾಗಿರಲಿಲ್ಲ. 'ಅವನು ಚಿನ್ನದ ಆಸೆಗೆ ಹುಚ್ಚನಾದರೆ, ನಾವು ಯಾಕೆ ಆಗಬೇಕು? ದೇವರು ಕೊಟ್ಟಿರುವುದನ್ನು ಬದಲಾಯಿಸುತ್ತೇನೆ ಎಂದು ಹೊರಟರೆ ತ್ರಿಶಂಕು ಸ್ವರ್ಗ ಸಿಕ್ಕಬಹುದು ಅಷ್ಟೇ. ಅತ್ತಲಾಗಿ ಸ್ವರ್ಗವು ಇಲ್ಲದೆ, ಇತ್ತಲಾಗಿ ಭೂಮಿಯೂ ಇಲ್ಲದಂತೆ ಆಗುತ್ತದೆ. ಇಲ್ಲೇ ನಾಲ್ಕು ಜನರಿಗೆ ಬೇಕಾಗುವ ಹಾಗೆ, ನಾಲ್ಕು ಜನರಿಗೆ ಉಪಕಾರ ಆಗುವ ಹಾಗೆ ಇದ್ದರೆ ಅದೇ ಚೆನ್ನ. ಅದೇ ಚಿನ್ನ.'

ಈ ಚೆನ್ನಾದ ಚಿನ್ನಕ್ಕೆ ನಾವು ಆಸೆಪಡೋಣವೆ?

ಪ್ರತಿಕ್ರಿಯಿಸಿ: feedback@sudha.co.in